**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**
**<u>ಅಫಜಲಪೂರ</u>**

ಸಿಸಿ ನಂ.132/2016

ಚಾಸಾ-9 ಪ್ರಾಸಾ-5

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕ: 15.07.2019

| | | |
|---|---|---|
| ಹೆಸರು | : | ಶರಣಪ್ಪ ಬಳಗಾರ |
| ತಂದೆ ಹೆಸರು | : | ಲಗಮಣ್ಣ |
| ವಯಸ್ಸು | : | 48-ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಕರಜಗಿ, ತಾ. ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿತರ ಪರಿಚಯವಿದೆ. ಚಾಸಾ-1 ನನ್ನ ತಮ್ಮನಾಗಬೇಕು. 3 ನೇ ಆರೋಪಿತನು ಸಂಬಂಧಿಕನಾಗಬೇಕು. 2-ವರ್ಷದ ಹಿಂದೆ ಆರೋಪಿತರು ಸಾಯಂಕಾಲ 6.30 ಗಂಟೆಗೆ ಹೊಲದ ಸೀಮೆ ಸಲುವಾಗಿ ಚಾಸಾ-1 ರವರಿಗೆ ತಮ್ಮ ಮನೆಯ ಮುಂದೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು 1 ನೇ ಆರೋಪಿತನು ಬಡಿಗೆಯಿಂದ ತಲೆಗೆ ಹೊಡೆದಿರುತ್ತಾನೆ. 2 ಮತ್ತು 3 ನೇ ಆರೋಪಿತರು ಓಡಿ ಬಂದು ಚಾಸಾ-1 ರವರನ್ನು ಹಿಡಿದುಕೊಂಡಿದ್ದರು. ಘಟನೆಯಾದ ನಂತರ ನಾನು ಹಾಗೂ ರಾಯಪ್ಪ ಕೂಡಿ ಚಾಸಾ-1 ರವರನ್ನು ಅಫಜಲಪೂರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಚಾಸಾ-1 ರವರು 2 ದಿನ ಚಿಕಿತ್ಸೆ ಪಡೆದಿರುತ್ತಾನೆ. ಸಾಕ್ಷಿ ಹಲ್ಲೆಗೆ ಬಳಸಿದ ಬಡಿಗೆಯನ್ನು ತೋರಿಸಲಾಗಿ ಆ ದಿನ ಬೇರೆ ಬಡಿಗೆಯಿತ್ತು ಎಂದು ನುಡಿಯುತ್ತಾರೆ. ಘಟನೆ ಸಮಯದಲ್ಲಿ ಬಹಳ ಜನರಿದ್ದರು. ಘಟನೆ ಸಮಯದಲ್ಲಿ ಚಾಸಾ-5, 6, 8 ರವರು ಇದ್ದರು. ಘಟನೆ ಕುರಿತು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಜೆ ಜಿ ವಕೀಲರಿಂದ

ಘಟನೆ ದಿನಾಂಕ ನನಗೆ ನೆನಪಿಲ್ಲ. ಆರೋಪಿತರು ಚಾಸಾ-1 ರವರಿಗೆ ಹೊಡೆಯದಿದ್ದರೂ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಚಾಸಾ-1 ರವರ ನಡುವೆ ಹೊಲದ ವಿಚಾರವಾಗಿ ಮೊದಲಿನಿಂದಲೂ ಜಗಳವಿದೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಬಡಿಗೆಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.132/2016

ಚಾಸಾ-10 ಎ ಪ್ರಾಸಾ-6

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 15.07.2019

| | | |
|---|---|---|
| ಹೆಸರು | ಃ | ಸಾಯಬಣ್ಣ ಜಮಾದಾರ |
| ತಂದೆ ಹೆಸರು | ಃ | ಶಾವಣ್ಣ |
| ವಯಸ್ಸು | ಃ | 62-ವರ್ಷ |
| ಉದ್ಯೋಗ | ಃ | ನಿವೃತ್ತ ಎ ಎಸ್ ಐ |
| ವಾಸಸ್ಥಳ | ಃ | ಕೂಡಿಗನೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಏಪ್ರಿಲ್-2014 ರಿಂದ 2016 ರವರೆಗೆ ಅಫಜಲಪೂರ ಪೋಲಿಸ್ ಠಾಣೆಯಲ್ಲಿ ಹೆಚ್ ಸಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 11.09.2015 ರಂದು ಮುಂಜಾನೆ 9.00 ಗಂಟೆಗೆ ಸರಕಾರಿ ಆಸ್ಪತ್ರೆಯಿಂದ ಎಂ ಎಲ್ ಸಿ ವರದಿ ಬಂದಿದ್ದು, ಮುಂಜನೆ 9.15 ಗಂಟೆಗೆ ಆಸ್ಪತ್ರೆಗೆ ಭೇಟಿ ಗಾಯಾಳುವಿನ ಹೇಳಿಕೆ ಪಿರ್ಯಾದಿ ಪಡೆದು, ಸದರಿ ಹೇಳಿಕೆ ಪಿರ್ಯಾದಿಯ ಆಧಾರದ ಮೇಲಿಂದ ಠಾಣಾ ಗುನ್ನೆ ನಂ.247/2015 ಎಂದು ದಾಖಲಿಸಿಕೊಂಡು ಪ್ರ.ವ.ವ. ನ್ನು ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪಿರ್ಯಾದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಅದರ ಮೇಲಿನ ಸಾಕ್ಷಿ ಸಹಿಗಳನ್ನು ನಿಪಿ-2 ಎ ಮತ್ತು 2 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ. ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು.

ಆನಂತರ ದಿನಾಂಕ 12.09.2015 ರಂದು ಮುಂಜಾನೆ 9 ರಿಂದ 10 ಗಂಟೆವರೆಗೆ ಚಾಸಾ-8 ರವರು ತೋರಿದ ಘಟನಾ ಸ್ಥಳದ ಪಂಚನಾಮೆ ಮಾಡಿ ಸ್ಥಳದಿಂದ

ಹಲ್ಲೆಗೆ ಬಳಸಿದ ಒಂದು ಬಡಿಗೆಯನ್ನು ಜಪ್ತಿಪಡಿಸಿಕೊಂಡು ಪಂಚನಾಮೆ ಬರೆದು ಓದಿ ಹೇಳಿ ಚಾಸಾ-2 ಮತ್ತು 3 ರವರ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಿದ್ದು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-5 ಎ, ಘಟನೆ ಕುರಿತು ಚಾಸಾ-4 ರಿಂದ 9 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ-7 ರವರು ನಿಪಿ-1 ರಂತೆ ಹೇಳಿಕೆ ನೀಡಿರುತ್ತಾರೆ. ಸಾಕ್ಷಿ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಎಂ.ಒ-1 ಎಂದು ಗುರುತಿಸಿದ್ದು, ಅದರ ಮೇಲಿನ ಸಾಕ್ಷಿ ಸಹಿಯನ್ನು ಎಂ.ಒ-1 ಎ ಎಂದು ಗುರುತಿಸಲಾಯಿತು. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-11 ರವರು ವಹಿಸಿಕೊಂಡಿರುತ್ತಾರೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಜೆ ಜಿ ವಕೀಲರಿಂದ

ದಿನಾಂಕ 11.09.2015 ಎಂ ವ್ ಸಿ ವರದಿ ಬಂದ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಿನ ಹೇಳಿಕೆ ಪಿರ್ಯಾದಿ ಪಡೆದು ಅದರ ಆಧಾರದ ಮೇಲಿಂದ ಪ್ರಕರಣ ದಾಖಲಿಸಿಕೊಂಡು, ಪಂಚರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿ ಸ್ಥಳದಿದ ಎಂ.ಒ-1 ನ್ನು ಜಪ್ತಿಪಡಿಸಿಕೊಂಡು, ಘಟನೆ ಕುರಿತು ಚಾಸಾ-4 ರಿಂದ 9 ರವರ ಹೇಳಿಕೆ ಪಡೆದಿರುತ್ತೇನೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ತನಿಖೆ ಕೈಗೊಂಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ